**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ ::78/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ನಾಗೇಂದ್ರ | **PW**-04 |
| **ತಂದೆಯ ಹೆಸರು** | : | ಭಾಸ್ಕರ | **CW**-12 |
| **ವಯಸ್ಸು** | : | 42 | |
| **ಉದ್ಯೋಗ** | : | ವ್ಯವಹಾರ | |
| **ವಾಸಸ್ಥಳ** | : | ಕಾಂಚೀನಗರ, ಶೃಂಗೇರಿ. | |

**ದಿನಾಂಕಃ20-02-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: A.P.P ರವರಿಂದ ::**

ದಿಃ16-11-2024 ರಂದು ಸಂಜೆ 6 ರಿಂದ 6.30 ವರೆವಿಗೂ ಶೃಂಗೇರಿ ಪೋಲೀಸರು ಮೃತ ಗೋಪಾಲ ರವರಿಗೆ ಅಪಘಾತವಾದ ನಂತರ ಸದರಿ ಅಪಘಾತವನ್ನುಂಟುಮಾಡಿ ಬಸ್ ನಂ.ಕೆ.ಎ-01/ಡಿ-3471 ಬಸ್ ಅನ್ನು ಅಮಾನತು ಮಾಡಿಕೊಳ್ಳುವ ಪ್ರಯುಕ್ತ ಪಂಚ ಸಾಕ್ಷಿದಾರನಾಗಿ ಸಹಕರಿಸುವಂತೆ ಪೋಲೀಸರು ನನಗೆ ಮತ್ತು ಚಾಸಾ-13 ರವರಿಗೆ ತಿಳಿಸಿದರು. ನನ್ನ ಮತ್ತು ಚಾಸಾ-13 ರವರ ಸಮಕ್ಷಮ ಸದರಿ ಬಸ್ ಅನ್ನು ಪೋಲೀಸರು ಆರೋಪಿತರಿಂದ ಸದರಿ ಬಸ್ ನಂ.ಕೆ.ಎ-01/ಡಿ-3471 ವಾಹನವನ್ನು ಸಂಜೆ 6.00 ರಿಂದ 6.30 ರ ವರೆವಿಗೂ ಪೋಲೀಸ್ ವಸತಿ ಗೃಹದಲ್ಲಿ ಜಪ್ತಿ ಮಾಡಿಕೊಂಡರು. ಅದೇ ಸಮಯದಲ್ಲಿ ಸ್ಥಳದಲ್ಲಿಯೇ ಪೋಲೀಸರು ಜಪ್ತಿ ಅಮಾನತು ಪಂಚನಾಮೆಯನ್ನು ದಾಖಲು ಮಾಡಿಕೊಂಡರು. ನಾನು ಸದರಿ ಅಮಾನತು ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ಅಮಾನತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

2. ಅದೇ ಸಂದರ್ಭದಲ್ಲಿ ಪೋಲೀಸರು 2 ಭಾವ ಚಿತ್ರಗಳನ್ನು ತೆಗೆದುಕೊಂಡರು, ಸದರಿ ಭಾವ ಚಿತ್ರಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ 2 ಭಾವ ಚಿತ್ರಗಳನ್ನು ನಿಪಿ-12 ಮತ್ತು ನಿಪಿ-13 ಎಂದು ಗುರುತಿಸಲಾಯಿತು. ನಿಪಿ-11 ರಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿದೆ.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ.K.C.C ವಕೀಲರಿಂದ ::**

ಚಾಸಾ-1 ರವರು ನನಗೆ ಪರಿಚಯಸ್ಥರು. ಪೋಲೀಸ್ ವಸತಿ ಗೃಹದಿಂದ ಕಾಂಚೀನಗರದ ನಮ್ಮ ಮನೆಗೆ 1 ಕಿ.ಮೀ ದೂರವಿದೆ. ಪೋಲೀಸ್ ವಸತಿ ಗೃಹದ ಸಮೀಪ ಸಾರ್ವಜನಿಕ ಸ್ಥಳವಾಗಿರುತ್ತದೆ ಎಂದರೆ ಸರಿ. ಅಲ್ಲಿ ಅನೇಕ ಸಾರ್ವಜನಿಕರು ಓಡಾಡುತ್ತಿರುತ್ತಾರೆ ಎಂದರೆ ಸರಿ. ಸದರಿ ಸ್ಥಳಕ್ಕೆ ಪೋಲೀಸರು ಮತ್ತು ನಾನು ಮತ್ತು ಚಾಸಾ-13 ಮತ್ತು ಆರೋಪಿತರು ಬಂದಿದ್ದೆವು. ಸಂಜೆ 6.00 ರಿಂದ 6.45 ರ ವರೆವಿಗೂ ಮಬ್ಬು ಇರುವುದರಿಂದ ಸ್ಥಳದಲ್ಲಿಯೇ ಬರವಣಿಗೆ ಮಾಡಲು ಸಾಧ್ಯವಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ 2 ಬಾರಿ ಸಹಿ ಮಾಡಿರುತ್ತೇನೆ. ನಾನು ಪೋಲೀಸರಿಂದ ಸ್ವೀಕರಿಸಿದ ನೋಟೀಸಿಗೆ ಮತ್ತು ನಿಪಿ-11 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ-11 ಅನ್ನು ಚಾಸಾ-20 ರವರ ನಿರ್ದೇಶದಂತೆ ಚಾಸಾ-19 ರವರು ಬರೆದಿರುತ್ತಾರೆ.

2. ಸದರಿ ಬಸ್ ಅಶೋಕ್ ಲೈ ಲಾಂಡ್ ಕಂಪನಿ ತಯಾರಿಸಿದ ಬಸ್ ಆಗಿರುತ್ತದೆ. ನಾನು ಅಮಾನತು ಪಡಿಸಿಕೊಂಡ ಬಸ್ ನ ವಿವರಣೆಯನ್ನು ಮತ್ತು ಅದರ ಮಾದರಿಯನ್ನು ಹೇಳಲು ನೆನಪಿರುವುದಿಲ್ಲ. ನಿಪಿ-12 ಮತ್ತು ನಿಪಿ-13 ಭಾವ ಚಿತ್ರಗಳು ಕತ್ತಲಲ್ಲಿ ತೆಗೆದ ಭಾವ ಚಿತ್ರಗಳು ಎಂದರೆ ಸರಿ. ನಿಪಿ-11 ಅನ್ನು ಪೋಲೀಸ್ ಠಾಣೆಯಲ್ಲಿಯೇ ತಯಾರಿಸಿ ನಾನು ಸದರಿ ದಾಖಲೆಗೆ ಪೋಲೀಸ್ ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-11 ರಲ್ಲಿ ಏನು ವಿಚಾರ ಬರೆದಿದೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಹೇಳಿದ್ದರಿಂದ ನಾನು ಈ ಪ್ರಕರಣದಲ್ಲಿ ನಿಪಿ-11ಕ್ಕೆ ಸಹಿ ಮಾಡಿ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.